

ನೆರತ ತಲೆ, ದುಪಡಿ ಹೊತಗಂದು ಗೂಬರಿಸಿ ಕುಂತವರಲ್ಲ ಅವರು.' ಅಂತ ಹಂಗೊಂದು ಹಿಂಗೊಂದು ಮಾತು. ಊರ ಸಾಧು ಬಸವ, ಸಾಧು ಬಸವ ಅಂದರೆ ಮಕ್ಕಳು ಮರಿ ಮ್ಯಾಲೆ ಕುಂತರೂ, ಕೊಂಬಿಡಿದು ಎಳೆದಾಡಿದರೂ, ಅಡಿಯಲಿ ನುಸಿದಾಡಿದರೂ ತಲೆ ಕೊಡವದ ಸಾಧು. ಆ ಬಸವ ಆವಪ್ಪನ ಪಕ್ಕವೆ ಕಟ್ಟೆಯಿಂದ ಮುಂಗಾಲು ಇಳಿಯಬಿಟ್ಟು ಕೂತಿತು. ಬಸವನ ಕೊಂಬೆಡರ ಮಧ್ಯೆ ನೀವಿದ. ಮೈಮೇಲೆ ಕೈಆಡಿಸಿದ. ಊರಿಗೆ ಹೊಸಬರು ಇದ್ದಂಗದೆ ಅಂದು ಯಾರೋ ಒಬ್ಬರು "ಯಾರು ನೀವು?" ಅಂದರು. ಕೈಅಳ್ಳಾಡಿಸುತ ಏನೂ ಹೇಳದೆ ಎದ್ದುಹೋದ.

ವಾರ ಒಪ್ಪತ್ತಾದರೂ ಊರವರಿಗೆ ಆವಪ್ಪ ಯಾರು ಅನ್ನೋದು ತಿಳಿಲಿಲ್ಲ. ಜನ ಕೇಳೋದು ಬಿಡಲಿಲ್ಲ. ಚನ್ನಕ್ಕನತ್ರ, 'ಊಟ ತಿಂಡಿಕೊಡು ನಾ ದುಡ್ಡು ಕೊಡ್ತೇನಿ' ಅಂತ ಮಾತಾಡವನಂತೆ. ಇದ್ದ ಸಣ್ಣ ಬ್ಯಾಗನ್ನು ಅಲ್ಲೆ ಇಟ್ಟವನಂತೆ. ಮಾತೇನಿಲ್ಲ, ಊಟದ ಚೀಲ ಇಸಕೊಂಡು ಚಾನಲ್ ಹತ್ರಾನೊ, ಹಳ್ಳದ ಹತ್ರಾನೊ ಹೋಗಿ ಉಂಡು ಬರ್ತಾನೆ. ಯಾಕೆ ಬಂದವನೆ ಏನು ಎತ್ತ ಒಂದೂ ತಿಳೀದು. ಆಗೀಗ ಊರ ಸಾಧು ಬಸವಗೆ ಸೊಪ್ಪು ಎಳೆಗರಿ ಹುಲ್ಲು ತಂದು ತಿನುಸ್ತಾನೆ. 'ಕಳ್ಳನೊ ಸುಳ್ಳನೊ ಬಲ್ಲವರಾರು? ಮಾಡಿದೋರ ಪಾಪ ಆಡಿದೋರ ಬಾಯಾಗೆ ನಮಿಗ್ಯಾಕೆ ಬಿಡು' ಅಂದುಕೊಂಡರು ಹಲವರು.

ಆವ್ಮ್ಯಾಗೊಂದಿನ ಊರಿನ ಹೈಸ್ಕೂಲ್‌ಗೆ ಹೋಗಿ ತಾನು ಯಾರು ಏನು ಎತ್ತ ಅನ್ನೋದನ್ನ